ದಿನಾಂಕ 12.02.2026 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ. S.T.N. ವಕೀಲರಿಂದ:**

ನಾನು ಎಂ . ಎಸ್ಸಿ . Agricultur ಪದವೀದರನಾಗಿರುತ್ತೇನೆ. ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ನಾನೇ ಹೇಳಿ ಬರೆಸಿರುತ್ತೇನೆ. ಸದರಿ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳು ನನಗೆ ತಿಳಿದಿದೆ. ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಕನಕಪುರ ಶಾಖೆಯಲ್ಲಿ ಜೂನ್ 2024 ರಿಂ ದ ಇಲ್ಲಿಯವರೆಗೆ ಕೆಲಸ ಮಾಡುತ್ತಿದ್ದೇನೆ. ಎಲ್ಲಿಂದ ಎಲ್ಲಿಯವರೆಗೆ ಕರ್ತವ್ಯ ನಿರ್ವಹಿಸಿದ್ದೇನೆ ಎಂದು ನಿಮ್ಮ ಪ್ರಮಾಣ ಪತ್ರದಲ್ಲಿ ಬರೆದಿರುತ್ತೀರಿ ಎಂದರೆ ಸರಿ . ಸದರಿ ದಾವೆಯಲ್ಲಿ ಸಾಕ್ಷಿಯನ್ನು ಹೇಳಲು ಮುಖ್ಯ ವ್ಯವಸ್ಥಾಪಕರಿಂದ ಅಧಿಕಾರ ಪತ್ರ ಪಡೆದಿದ್ದೀರಾ ಎಂದರೆ ಸಾಕ್ಷಿದಾರರು ಇಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿ ಮಂಜುನಾಥ್ ರವರು ಚೀಟಿ ಸಂಜೀವನದೊಡ್ಡಿ ಬೀದಿ , ಹಲಸಿನಮರದ ದೊಡ್ಡಿ , ಕನಕಪುರದಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿ .

2013 ರಲ್ಲಿ ಪ್ರತಿವಾದಿಯವರು ರಾಮನಗರ ಜಿಲ್ಲಾ ಪಂಚಾಯಿತ್ ನಲ್ಲಿ ಅಟೆಂಡರ್ ಆಗಿ ಕರ್ತವ್ಯ ನಿರ್ವಹಿಸಿರುತ್ತಾರೆ ಎಂದರೆ ಸರಿ . ಪ್ರತಿವಾದಿಯವರು ರೈತರ ಸೇವಾ ಸೊಸೈಟಿಯಲ್ಲಿ ಅಟೆಂಡರ್ ಹಾಗೂ ರಾತ್ರಿ ಕಾವಲುಗಾರರಾಗಿ ಆಗಿ 07.07.2014 ರಿಂದ ಕೆಲಸ ಮಾಡುತ್ತಿದ್ದಾರೆ ಎಂದರೆ ಸಾಕ್ಷಿದಾರರು ದಿನಾಂಕ ನನಗೆ ಗೊತ್ತಿಲ್ಲ , ಆದರೆ ಕೆಲಸ ಮಾಡುತ್ತಿದ್ದಾರೆ ಎಂದು ನುಡಿಯುತ್ತಾರೆ. ಸದರಿ ಕೆಲಸ ಪ್ರತಿವಾದಿಯ ಖಾಯಂ ಕೆಲಸ ಆಗಿರುತ್ತದೆ ಎಂದರೆ ಗೊತ್ತಿಲ್ಲ.

ರವಿಕುಮಾರ್ ಎನ್ನುವವರು ರೈತರ ಸೇವಾ ಸೊಸೈಟಿಯಲ್ಲಿ ಅಕೌಂಟೆಂಟ್ ಆಗಿ ಕೆಲಸ ಮಾಡಿಕೊಂಡು ಬಂದು 2018 ರಲ್ಲಿ ಬ್ಯಾಂಕ್ ಮ್ಯಾನೇಜರ್ ಆಗಿ ಬಡ್ತಿ ಪಡೆದಿರುತ್ತಾರೇ ಎಂದರೆ ಆ ಬಗ್ಗೆ ನನಗೆ ತಿಳಿದಿಲ್ಲ ಎಂದು ನುಡಿಯುತ್ತಾರೆ. ರೈತರ ಸೇವಾ ಸಂಘದ ಸೊಸೈಟಿಯ ಹಣಕಾಸು ಮತ್ತು ಗೋಲ್ಡ್ ನ ಎಲ್ಲಾ ವ್ಯವಹಾರವನ್ನು ಕೆ.ಜಿ. ರವಿಕುಮಾರ್ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ಸಾಮಾನ್ಯವಾಗಿ ಯಾವುದೇ ಬ್ಯಾಂಕ್ ನಲ್ಲಿ ಹಣಕಾಸು ಮತ್ತು ಗೋಲ್ಡ್ ನ ಎಲ್ಲಾ ವ್ಯವಹಾರವನ್ನು ಮ್ಯಾನೇಜರ್ , ಅಕೌಂಟೆಂಟ್ ಮತ್ತು ಕ್ಯಾಷಿಯರ್ ನೋಡಿಕೊಳ್ಳುತ್ತಾರೆ ಎಂದರೆ ಸರಿ . ಹಣಕಾಸು ಮತ್ತು ಗೋಲ್ಡ್ ನ ಅನ್ನು ಲಾಕರ್ ನಲ್ಲಿ ಇಡಲು ಮತ್ತು ತೆಗೆಯಲು ಕೀ ಗಳನ್ನು ಮ್ಯಾನೇಜರ್ , ಅಕೌಂಟೆಂಟ್ ಮತ್ತು ಕ್ಯಾಷಿಯರ್ ಇಟ್ಟುಕೊಳ್ಳುತ್ತಾರೆ ಎಂದರೆ ಸರಿ . ಬ್ಯಾಂಕಿನಲ್ಲಿ ಕೆಲಸ ಮಾಡುವ ಅಟೆಂಡರ್ ಗೆ ಹಣಕಾಸು ಮತ್ತು ಗೋಲ್ಡ್ ನ ವ್ಯವಹಾರಗಳನ್ನು ಕಾರ್ಯ ನಿರ್ವಹಿಸುವ ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ.

ನಿಮ್ಮ ಸಾಕ್ಷಿ ಪ್ರಮಾಣ ಪತ್ರ 28.06.2023 ರಲ್ಲಿ ಕನಕಪುರ ಟೌನ್ ಪೋಲಿಸರು ಸೀಜರ್ ನೋಟಿಸ್ ನೀಡಿರುವ ಬಗ್ಗೆ ಹೇಳಿರುತ್ತೀರಿ , ಅದಕ್ಕೆ ಸಂಬಂಧಪಟ್ಟಂತೆ ದಾಖಲೆಯನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿದಾರರು ಹೌದು ಎಂದು ನುಡಿಯುತ್ತಾರೆ. ಸೀಜರ್ ಸಮಯದಲ್ಲಿ ನಾನು ಸದರಿ ಬ್ಯಾಂಕ್ ನಲಿ ಕೆಲಸ ಮಾಡುತ್ತಿರಲಿಲ್ಲ ಎಂದು ನುಡಿಯುತ್ತಾರೆ. ಪೋಲಿಸರು ಸೀಜರ್ ಮಾಡುವ ಸಮಯದಲ್ಲಿ ಪ್ರತಿವಾದಿಯನ್ನು ಬ್ಯಾಂಕ್ ಗೆ ಕರೆದುಕೊಂಡು ಬಂದಿರಲಿಲ್ಲ ಎಂದರೆ ಸರಿ .

ನಿಪಿ-10 ರಂತೆ ರವಿಕುಮಾರ್ ರವರ ಮೇಲೆ ನೇರವಾದ ದೂರು ಇದೆ ಎಂದರೆ ಸರಿ . ನಿಪಿ-10 ರಂತೆ ಪ್ರತಿವಾದಿಯ ಮೇಲೆ ಯಾವುದೇ ನೇರವಾದ ದೂರು ಇಲ್ಲ ಎಂದರೆ ಸರಿಯಲ್ಲ. ರವಿಕುಮಾರ್ ರವರು ಮ್ಯಾನೇಜರ್ ಆಗಿರುವ ಸಮಯದಲ್ಲಿ ಅವರು ತಮ್ಮ ಸ್ವಂತ ಒಡವೆ ಎಂದು ಹೇಳಿ ಅದನ್ನು ಪ್ರತಿವಾದಿ ಬಳಿ ನೀಡಿ ಬ್ಯಾಂಕಿನಿಂದ ಸಾಲ ಪಡೆದಿದ್ದಾರೆ ಎಂದರೆ ಸಾಕ್ಷಿದಾರರು ರವಿಕುಮಾರ್ ಮಾತ್ರವಲ್ಲ , ಶಿವರುದ್ರಯ್ಯ , ಮಂಜುನಾಥ್ ಮೂರು ಜನ ಸೇರಿ ಸಾಲ ಪಡೆದಿರುವುದಾಗಿ ನುಡಿಯುತ್ತಾರೆ. ಸದರಿ ಅಡಮಾನವಿಟ್ಟ ಒಡವೆಗೆ ಹಣವನ್ನು ನೀವು ರವಿಕುಮಾರ್ ರವರಿಗೆ ಮಾತ್ರ ಮಂಜೂರು ಮಾಡಿರುತ್ತೀರಿ ಎಂದರೆ ಸರಿಯಲ್ಲ, ಮೂರು ಜನರಿಗೂ ಹಣ ಮಂಜೂರಾಗಿರುತತದೆ ಎಂದು ನುಡಿಯುತ್ತಾರೆ. ಪ್ರತಿವಾದಿಯ ಮೇಲೆ FIR ಆಗಿ ಆತನನ್ನು ದಸ್ತಗಿರಿ ಮಾಡಿದಾಗ ಆತನಿಗೆ ಸದರಿ ಒಡವೆ ಸಾರ್ವಜನಿಕರದು ಎಂದು ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ಬ್ಯಾಂಕಿನಿಂದ ಗೋಲ್ಡ್ ಲೋನ್ ನೀಡುವ ಸಮಯದಲ್ಲಿ ರಶೀದಿಯನ್ನು ನೀಡಿದ್ದೀರಾ ಎಂದರೆ ಸಾಕ್ಷಿದಾರರು ಹೌದು ಎಂದು ನುಡಿಯುತ್ತಾರೆ. ಅಸಲು ದಾವಾ ಸಂಖ್ಯೆ 17, 18, 19/ 2024 ರಲ್ಲಿ ಹೇಳಲಾದ ರಶೀದಿಗಳು ಎಲ್ಲವೂ ರವಿಕುಮಾರ್ ರವರ ಮನೆಯಲ್ಲಿ ಸಿಕ್ಕಿರುತ್ತದೆ ಎಂದರೆ ದಾಖಲೆಗಳ ಪ್ರಕಾರ ರವಿಕುಮಾರ್ ಮನೆಯಲ್ಲಿ ಸಿಕ್ಕಿರುವುದಾಗಿ ನುಡಿಯುತ್ತಾರೆ.

ಪ್ರತಿವಾದಿ ನಿಮ್ಮ ಬ್ಯಾಂಕಿನಲ್ಲಿ ಯಾವುದೇ ಸಾಲವನು ಪಡೆದಿರುವುದಿಲ್ಲ , ಹಾಗೂ ಯಾವುದೇ ಸಾಲವನ್ನು ತೀರಿಸಲು ಬಾಧ್ಯಸ್ಥನಾಗಿರುವುದಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಸದರಿ ಸಾಲದ ಮೂಲ ರೂವಾಗಿ ರವಿಕುಮಾರ್ ಕೆ.ಜಿ. ಯವರೇ ಎಂದರೆ ಸಾಕ್ಷಿದಾರರು ಯಾರು ಸಾಲವನ್ನು ಪಡೆದಿರುತ್ತಾರರೋ ಅವರೇ ಜವಬ್ದಾರಿ ಎಂದು ನುಡಿಯುತ್ತಾರೆ. ಈ ಚಿನ್ನದ ಸಾಲವನ್ನು ರವಿಕುಮಾರ್ ರವರ ಬಳಿ ವಸೂಲಿ ಮಾಡಬೇಕುಕ ಪ್ರತಿವಾದಿಯಿಂದಲ್ಲ ಎಂದರೆ ಸರಿಯಲ್ಲ.

ಈ ದಾವೆಯನ್ನು ಹಾಕುವ ಮುಂಚೆ ನಿಮ್ಮ ಬ್ಯಾಂಕಿನಿಂದ ರವಿಕುಮಾರ್ ರವರಿಗೆ ಯಾವುದೇ ನೋಟಿಸ್ ಅನ್ನು ನೀಡಿರುವುದಿಲ್ಲ ಎಂದರೆ ಸರಿ . ಈ ಪ್ರಕರಣದಲ್ಲಿ ಸಾಕ್ಷಿ ನುಡಿಯಲು ನಿಮ್ಮ ಬ್ಯಾಂಕಿನ ಮೇಲಾಧಿಕಾರಿ ಯಾವುದೇ ಅಧಕಾರ ನೀಡದಿದ್ದರೂ ನೀವು ನ್ಯಾಯಾಲಯಕ್ಕೆ ಹಾಜರಾಗಿ ಬ್ಯಾಂಕಿನ ಪರವಾಗಿ ಸುಳ್ಳು ಸಾಕ್ಷಿ ನುಡಿಯತ್ತಿದ್ದೀರಿ ಎಂದರೆ ಸರಿಯಲ್ಲ. ಅಧಿಕಾರ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿದಾರರು ಇಲ್ಲ ಎಂದು ನುಡಿಯುತ್ತಾರೆ. ಅಧಿಕಾರ ಪತ್ರವನ್ನು ನ್ಯಾಯಾಲಯಕ್ಕೆ ನೀಡಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ . ಪ್ರತಿವಾದಿ ಈ ಪ್ರಕರಣದಲ್ಲಿ ಯಾವುದೇ ಚಿನ್ನದ ಸಾಲವನ್ನು ಕೊಡಬೇಕಾಗಿಲ್ಲ ಆದರೂ ಪ್ರತಿವಾದಿಯ ವಿರುದ್ಧ ಸುಳ್ಳು ಪ್ರಕರಣವನ್ನು ಹಾಕಿ ಸುಳ್ಳು ದಾವೆಯನ್ನು ಹೂಡಿರುತ್ತೀರಿ ಎಂದರೆ ಸರಿಯಲ್ಲ.

ಈ ಪ್ರಕರಣವನ್ನು ಸಲ್ಲಿಸುವ ಮೊದಲು ಪ್ರತಿವಾದಿಗೆ ದಿನಾಂಕ 08.11.2023 ರಂದು ಸುಳ್ಳು ನೋಟಸ್ ನೀಡಿರುತ್ತೀರಿ ಎಂದರೆ ಸರಿಯಲ್ಲ. ನಿಪಿ- 1 ಮತ್ತು 2 ರ ಪ್ರಕಾರ ಸಾಲವನ್ನು ಮಂಜುನಾಥ್ ರೆಡ್ಡಿಗೆ ನೀಡಿರುತ್ತೀರಿ ಪ್ರತಿವಾದಿ ಗೆ ಅಲ್ಲ ಎಂದರೆ , ಇಬ್ಬರೂ ಒಬ್ಬರೇ ಎಂದು ನುಡಿಯುತ್ತಾರೆ. ಈ ಪ್ರಕರಣವನ್ನು ಮಂಜುನಾಥ್ ಜಿ ರವರ ಮೇಲೆ ಸಲ್ಲಿಸಿರುತ್ತೀರಿ ಎಂದರೆ ಸರಿ . ಮಂಜುನಾಥ್ ರೆಡ್ಡಿ , ಮಂಜುನಾಥ್ ಜಿ ಇಬ್ಬರೂ ಒಬ್ಬರೇ ಎನ್ನುವ ಸಂಬಂಧ ದಾಖ್ಲಾತಿ ನೀಡಿದ್ದೀರಾ ಎಂದರೆ ಸಾಕ್ಷಿದಾರರು KYC ದಾಖಲೆ ನೀಡಿರುವುದಾಗಿ ನುಡಿಯುತ್ತಾರೆ.

ಪ್ರತಿವಾದಿಯ ಮೇಲೆ ಸಲ್ಲಿಸಲಾದ ಸಿ.ಸಿ. 1150/2023 ಇನ್ನೂ ವಿಚಾರಣಾ ಹಂತದಲ್ಲಿದೆ ಎಂದರೆ ಸರಿ . ಪ್ರಸ್ತುತ ಪ್ರಕರಣದ ವಾಸ್ತಾವಾಂಶ ನಿಮಗೆ ಗೊತ್ತಿದೆ , ರವಿಕುಮಾರ್ ಇದರ ಮೂಲ ರೂವಾರಿಯಾಗಿರುತ್ತಾರೆ , ಆದರೂ ಸಹ ಪ್ರತಿವಾದಿಯ ಮೇಲೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. O.S. 17,18, 19/2024 ರಲ್ಲಿ ಹೇಳಲಾದ ಪೂರ್ತಿ ಚಿನ್ನದ ಸಾಲದ ಹಣವನ್ನು ನೀವು ರವಿಕುಮಾರ್

ರವರಿಗೆ ನೀಡಿರುತ್ತೀರಿ , ಪ್ರತಿವಾದಿಗೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. 15.04.2024 ರಂದು ರವಿಕುಮಾರ್ ಕೆ.ಜಿ. ಸಿ.ಸಿ. 1150/2023 ರಲ್ಲಿ ಸದರಿ ಪ್ರಕರಣಕ್ಕೆ ನಾನೇ ಜವಾಬ್ದಾರಿಯಾಗಿದ್ದು , ಪ್ರತಿವಾದಿ ಅಲ್ಲ ಎಂದು ಒಪ್ಪಿಗೆ ಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ ಹೇ ಕೇ ಸ ಒ

ಎರಡನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಕನಕಪುರ